# ಪ್ರಧಾನ ದಿವಾಣಿ ನ್ಯಾಯಾಲಯ ಹಾಗೂ ಪ್ರ.ದ.ನ್ಯಾದಂಡಾಧಿಕಾರಿಗಳು, ಅಥಣಿ

---

ಸಿ.ಸಿ.ನಂ : **187/2012** ದಿನಾಂಕ : **16/11/2023**

ಸಿ. ಡಬ್ಲೂ : **10**

ಪಿ. ಡಬ್ಲೂ : **3**

---

| | |
|---|---|
| ಸಾಕ್ಷಿದಾರರ ಹೆಸರು | ಸದಾಶಿವ ಕೆ ಭಜಂತ್ರಿ |
| ವಯಸ್ಸು | 65 ವರ್ಷ |
| ಉದ್ಯೋಗ | ನಿವೃತ್ತ ಎ ಎಸ ಐ |
| ವಾಸಸ್ಥಳ | ಮಲಾಬಾದ |
| ದಿನಾಂಕ | **16/11/2023** ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋದಿಸಲಾಯಿತು. |

---

* * *

<u>ಮುಖ್ಯ ವಿಚಾರಣೆ ಸ.ಸ.ಅ. ವಕೀಲರವರಿಂದಃ</u>

2010 ರಿಂದ 2012 ರವರೆಗೆ ಪೊಲೀಸ ಪೇದೆ ಅಂತಾ ಅಥಣಿ ಠಾಣೆಯಲ್ಲಿ ಕೆಲಸ ಮಾಡಿರುತ್ತೇನೆ. ದಿಃ 08.08.2010 ರಂದು , ಈ ಪ್ರಕರಣದಲ್ಲಿ ಅಮಾನತ್ತು ಪಡಿಸಿಕೊಂಡ ಮಾದರಿ ಸ್ಪೋಟಕ ವಸ್ತುಗಳನ್ನು ಮತ್ತು ಅದಕ್ಕೆ ಸಂದಂಧ ಪಟ್ಟ ದಾಖಲಾತಿಗಳನ್ನು ಪಡೆದು, ಮಾನ್ಯ ಡಿವಾಯಎಸಪಿ ಚಿಕ್ಕೋಡಿವರ ಅನುಮತಿ ಪಡೆದುಕೊಂಡು, 13.08.2010 ರಂದು ಬೆಂಗಳೂರು ಎಫಎಸಎಲ ಕಛೇರಿಗೆ ಹಾಜರು ಪಡಿಸಿರುತ್ತೇನೆ. ಸದರಿ ವಸ್ತುಗಳನ್ನು ಸ್ವೀಕರಿಸಿದಕ್ಕೆ ಎಫಎಸಎಲ ಕಛೇರಿರವರು ಸ್ವಿಕೃತಿ ಪತ್ರ ನೀಡಿದ್ದರು. 14.08.2010 ರಂದು ಆ ಬಗ್ಗೆ ವರದಿಯನ್ನು ತನಿಖಾಧಿಕಾರಿ ಮುಂದೆ ನೀಡಿರುತ್ತೇನೆ. ದಿಃ 05.11.2010 ರಂದು ಆರೋಪಿತರನ್ನು ತಪಾಸಣೆ ಮಾಡಲು ಹೋಗಿದ್ದೆನು. 2 ನೇ ಆರೋಪಿತನನ್ನು ಮಹಾರಾಷ್ಟ್ರದ ಸಾಂಗಲವಾಡಿಯಲ್ಲಿ ಪತ್ತೆ ಮಾಡಲು ಹೋದಾಗ, ಆತನು ಪತ್ತೆ ಆಗಲಿಲ್ಲ. ಆ ಬಗ್ಗೆ ತನಿಖಾಧಿಕಾರಿಗೆ ವರದಿ ಹೇಳಿರುತ್ತೇನೆ.

<u>ಪಾಟೀ ಸವಾಲುಃ ಆರೋಪಿತರ ಪರವಾಗಿ ಶ್ರೀ ಕೆ ಎ ವಿ ವಕೀಲರಿಂದಃ</u>

ನಿಮ್ಮ ಮೇಲಾಧಿಕಾರಿಗಳು ಎಫಎಸಎಲ ಕಛೇರಿಗೆ ಹೋಗಲು ಹೇಳಿದ್ದರು. ಮು.ಮಾಗಳನ್ನು ಯಾರಿಂದ, ಎಲ್ಲಿ ಅಮಾನತ್ತು ಪಡಿಸಿಕೊಳ್ಳಲಾಗಿತ್ತು ಅಂತಾ ತನಿಖಾಧಿಕಾರಿಗಳು ಹೇಳಿರಲಿಲ್ಲ. ಚಾಸಾ-13 ನಿಮ್ಮ ಮೇಲಾಧಿಕಾರಿಗಳಾಗಿದ್ದರಿಂದ ಅವರು ಹೇಳಿದಂತೆ ನೀವು ಸಾಕ್ಷಿ ನುಡಿಯುತಿದ್ದೀರಿ ಎಂದರೆ ಸರಿಯಲ್ಲ.

ಎಫಎಸಎಲ ಕಛೇರಿಗೆ ಮು.ಮಾಗಳನ್ನು ಹಾಜರು ಪಡಿಸಿಲ್ಲ ಎಂದರೆ ಸರಿಯಲ್ಲ. ಆರೋಪಿತರಿಗೂ , ಪ್ರಕರಣದ ಮು.ಮಾಗಳಿಗೂ ಯಾವುದೇ ಸಂಬಂಧ ಇಲ್ಲ ಎಂದರೆ ಸರಿಯಲ್ಲ. ನಿಮ್ಮ ಹೇಳಿಕೆಯಲ್ಲಿ ಯಾವ ದಿನಾಂಕದಿಂದು ಯಾವ ಊರಿನಲ್ಲಿ 2 ನೇ ಆರೋಪಿತನನ್ನು ಪತ್ತೆ ಮಾಡಲು ಹೋಗಿದ್ದೀರಿ ಅಂತಾ ನಮೂದು ಮಾಡಿಲ್ಲ ಎಂದರೆ ಸರಿಯಲ್ಲ. ನಾನು 2 ನೇ ಆರೋಪಿತನನ್ನು ಪತ್ತೆ ಮಾಡಲು ಹೋದಾಗ ಯಾವ ವ್ಯಕ್ತಿಯನ್ನು ವಿಚಾರಿಸಿದ್ದೆನು ಅಂತಾ ಅವರ ಹೆಸರುಗಳನ್ನು ನನ್ನ ಹೇಳಿಕೆಯಲ್ಲಿ ಹೇಳಿಲ್ಲ, ಅವರ ಹೆಸರುಗಳನ್ನು ಹೇಳಲು ತೊಂದರೆ ಇರಲಿಲ್ಲ. ನೀವು ಸುಳ್ಳು ಸಾಕ್ಷಿ ಹೇಳುತ್ತಿದ್ದೀರಿ ಎಂದರೆ ಸರಿಯಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ.ಸರಿ ಇದೆ

(ಜಗದೀಶ ಬಿಸೇರೊಟ್ಟಿ)
ಪ್ರಧಾನ ಸಿವಿಲ್ ನ್ಯಾಯಾಧೀಶರು ಹಾಗೂ
ಜೆ.ಎಂ.ಎಫ್.ಸಿ.ನ್ಯಾಯಾಲಯ, ಅಥಣಿ